ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ        ದಿನಾಂಕ : DATE : 19/3/2020

# ಶಾಸಕರ ಪ್ರತ್ಯೇಕ ಭೇಟಿಗೆ ಸುಪ್ರೀಂ ನಕಾರ

ಉ.ವಾ. 19/3/20

ನವದೆಹಲಿ: ಬೆಂಗಳೂರಿನಲ್ಲಿರುವ ಮಧ್ಯಪ್ರದೇಶದ ಕಾಂಗ್ರೆಸ್ ಶಾಸಕರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಕೊಠಡಿಯಲ್ಲಿ ನ್ಯಾಯಮೂರ್ತಿಗಳ ಮುಂದೆ ಹಾಜರುಪಡಿಸುವ ಪ್ರಸ್ತಾವನೆಯನ್ನು ಸರ್ವೋಚ್ಚ ನ್ಯಾಯಾಲಯ ತಿರಸ್ಕರಿಸಿದೆ. ಜತೆಗೆ ಈ ವಿಚಾರದಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ ಎಂದಿದೆ.

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್‌ಸಿಂಗ್ ಚೌಹಾಣ್ ತಮ್ಮ ವಕೀಲರಾದ ಮುಕುಲ್ ರೋಹಟಗಿ ಮೂಲಕ ಈ ಪ್ರಸ್ತಾವನೆ ಸಲ್ಲಿಸಿದ್ದರು. ಬೆಂಗಳೂರಿನಲ್ಲಿರುವ 18 ಕಾಂಗ್ರೆಸ್ ಶಾಸಕರು, ಸ್ವ ಇಚ್ಛೆಯಿಂದ ಮಧ್ಯಪ್ರದೇಶ ಬಿಟ್ಟುಬಂದಿದ್ದಾರೆ. ಅವರನ್ನು ಬಿಜೆಪಿ, ಬಂದಿಗಳನ್ನಾಗಿ ಇರಿಸಿಕೊಂಡಿಲ್ಲ ಎಂಬುದನ್ನು ಶಾಸಕರಿಂದಲೇ ನ್ಯಾಯಮೂರ್ತಿಗಳಿಗೆ ಖಾಸಗಿಯಾಗಿ ಮನವರಿಕೆ ಮಾಡಿಕೊಡಲು ಚೌಹಾಣ್ ಈ ಪ್ರಸ್ತಾವನೆ ಸಲ್ಲಿಸಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿದ ನ್ಯಾ. ಡಿ.ವೈ. ಚಂದ್ರಚೂಡ್, ನ್ಯಾ. ಹೇಮಂತ್ ಗುಪ್ತಾ ಅವರುಳ್ಳ ನ್ಯಾಯಪೀಠ, 'ಶಾಸಕರು' ರಾಜಕೀಯ ಶಕ್ತಿಯೊಂದರ ಹಿಡಿತದಲ್ಲಿದ್ದಾರೆಯೇ ಎಂಬುದರ ಬಗ್ಗೆ ಆತಂಕಗಳು ಎದ್ದಿವೆ. ಇದನ್ನು ಪರಿಸುವುದಷ್ಟೇ ನಮ್ಮ ಉದ್ದೇಶ. ಜೊತೆಗೆ, ಶಾಸಕರು ವಿಶ್ವಾಸ ಮತ

## ಸ್ಪೀಕರ್‌ಗೆ ಶ್ಲಾಘನೆ

ಮುಖ್ಯಮಂತ್ರಿ ಕಮಲ್‌ನಾಥ್ ಮನವಿ ಮೇರೆಗೆ ತಮ್ಮದೇ ಪಕ್ಷದ ಆರು ಸಚಿವರ ರಾಜೀನಾಮೆಯನ್ನು ಅಂಗೀಕಾರ ಮಾಡಿರುವ ಸ್ಪೀಕರ್‌ರವರ ನಡೆಯನ್ನು ಅಲ್ಲಿನ ರಾಜ್ಯಪಾಲ ಲಾಲ್‌ಜೀ ಟಂಡನ್ ಕೊಂಡಾಡಿದ್ದಾರೆ. "ರಾಜೀನಾಮೆಗಳನ್ನು ಅಂಗೀಕರಿಸಿದ್ದು ನಿಷ್ಪಕ್ಷಪಾತ ಹಾಗೂ ದಿಟ್ಟತನದ ನಡೆ. ಕಳೆದ 8–10 ದಿನಗಳಿಂದ ನೀವು (ಸ್ಪೀಕರ್) ಎಂಥಾ ತೊಳಲಾಟದಲ್ಲಿದ್ದೀರಿ ಎಂಬುದನ್ನು ನಾನು ಬಲ್ಲೆ" ಎಂದು ರಾಜ್ಯಪಾಲರು ಹೇಳಿದ್ದಾರೆ.

> ಬೆಂಗಳೂರಿನಲ್ಲಿ ಪೊಲೀಸರು ದಿಗ್ವಿಜಯ್ ಸಿಂಗ್‌ರನ್ನು ಬಂಧಿಸಿರುವ ಕ್ರಮದಿಂದಾಗಿ ಮೋದಿ ಸರ್ಕಾರ ಸರ್ವಾಧಿಕಾರಿ ಧೋರಣೆ ಮತ್ತು ಹಿಟ್ಲರ್ ಮಾದರಿ ಆಡಳಿತ ನಡೆಸುತ್ತಿದೆ ಎನ್ನುವುದಕ್ಕೆ ಸಾಕ್ಷಿ.
>
> ▪ ಕಮಲ್‌ನಾಥ್, ಮಧ್ಯಪ್ರದೇಶ ಮುಖ್ಯಮಂತ್ರಿ

ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಬಿಡುವುದು ಅವರಿಗೆ ಬಿಟ್ಟ ವಿಚಾರ. ಆದರೆ, ಅವರು ತಮ್ಮ

- ಶಾಸಕರ ಸ್ವಾತಂತ್ರ್ಯ ಬಗೆಗಿನ ಆತಂಕ ನೀಗುವುದಷ್ಟೇ ನಮ್ಮ ಜವಾಬ್ದಾರಿ. ಎಂದ ಕೋರ್ಟ್
- ಕರ್ನಾಟಕ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಕಚೇರಿಗೆ ಹಾಜರಾಗುವ ಪ್ರಸ್ತಾವನೆಗೂ ನಕಾರ
- ಶಾಸಕರ ರಾಜೀನಾಮೆ ಬೇಗನೇ ಅಂಗೀಕರಿಸುವಂತೆ ಮಧ್ಯಪ್ರದೇಶ ಸ್ಪೀಕರ್‌ಗೆ ತಾಕೀತು

ನಿರ್ಧಾರಗಳನ್ನು ಸ್ವತಂತ್ರವಾಗಿ ಕೈಗೊಳ್ಳುತ್ತಿದ್ದಾರೆಯೇ, ಇಲ್ಲವೇ ಎಂಬುದಷ್ಟೇ ನಮಗೆ ಮುಖ್ಯ' ಎಂದಿತು. ಆಗ, ತಾವು ಸ್ವತಂತ್ರರು ಎಂಬುದನ್ನು ಸಾಬೀತುಪಡಿಸಲು ಬೆಂಗಳೂರಿನಲ್ಲಿರುವ ಕಾಂಗ್ರೆಸ್ ಶಾಸಕರು, ಕರ್ನಾಟಕ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಕಚೇರಿಗೆ ಭೇಟಿ ನೀಡಿ ವಿವರಣೆ ನೀಡಬಹುದೇ ಎಂಬ ಮತ್ತೊಂದು ಪ್ರಸ್ತಾವನೆಯನ್ನೂ ನ್ಯಾಯಪೀಠ ತಿರಸ್ಕರಿಸಿತು. ಇದೇ ವೇಳೆ, ಶಾಸಕರು ನೀಡಿದ ರಾಜೀನಾಮೆಗಳನ್ನು ಶೀಘ್ರವೇ ಅಂಗೀಕರಿಸುವಂತೆಯೂ ಸ್ಪೀಕರ್‌ಗೆ ಸೂಚಿಸಿತು.